# IN THE COURT OF THE ADDL. SENIOR CIVIL JUDGE & JMFC., GUBBI
# **OS – 304/2023**

Witness present and duly sworn on : 04.02.2025.

Cross Examination: by Counsel for Defendant No.1. :

ನಾನು ಓದಿರುವುದಿಲ್ಲ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ಈ ದಾವೆಯನ್ನು ಸರ್ವೆ ನಂ.41/6 ರ ಜಮೀನಿನ ಮೇಲೆ ಸಲ್ಲಿಸಿದ್ದೇನೆ. ಸರ್ವೆ ನಂ.41/6 ಪೂರ್ವದಲ್ಲಿ ಅದರ ಸರ್ವೆ ನಂಬರ್ ಯಾವುದು ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ನಾವುಗಳು ಹಬ್ಬತನಹಳ್ಳಿ ನಾಯಕರ್ ರಂಗರವರ ವಾರಸುದಾರರು ಎಂದು ಆಸ್ತಿಯಲ್ಲಿ ಹಕ್ಕು ಕೇಳಿ ದಾವೆ ಸಲ್ಲಿಸಿದ್ದೇನೆ. ನನ್ನ ವಾದ ಪತ್ರದಲ್ಲಿ ಹೇಳಿರುವ ಸರ್ವೆ ನಂ.41/4 ರಲ್ಲಿ ಪೋಡಿಯಾರಿರುವ ಸರ್ವೆ ನಂ.41/6 ಜಮೀನು ಮೂಲತಹ ಹಬ್ಬತನಹಳ್ಳಿ ನಾಯಕರ್ ರಂಗ ರವರಿಗೆ ಸೇರಿದ ಜಮೀನು. ಸರ್ವೆ ನಂ.41/5 ಜಮೀನು ಹಬ್ಬತನಹಳ್ಳಿ ನಾಯಕರ್ ರಂಗ ರವರ ಜಮೀನು. ಸದರಿ ಹಬ್ಬತನಹಳ್ಳಿ ನಾಯಕರ್ ರಂಗ ರವರಿಗೆ ಆಸ್ತಿಯು ಹೇಗೆ ಬಂದಿದೆ ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿದ್ದೇನೆ. 1931 ರ ಕ್ರಯಪತ್ರವನ್ನು ಹಾಜರುಪಡಿಸಿದ್ದೇನೆ. ಸಾಕ್ಷಿಗೆ ಈ ಸಮಯದಲ್ಲಿ ಆತನು ಹಾಜರುಪಡಿಸಿರರುವ ದಾಖಲೆಗಳನ್ನು ತೋರಿಸಿದ್ದು ಅದರಲ್ಲಿ 1931 ರ ಕ್ರಯಪತ್ರ ಯಾವುದು ಎಂದರೆ ನನಗೆ ಓದಲು ಬರುವುದಿಲ್ಲ. ದಾವಾ ಆಸ್ತಿಯಲ್ಲಿ ಹಬ್ಬತನಹಳ್ಳಿ ನಾಯಕರ್ ರಂಗ ರವರಿಗೆ ಹಕ್ಕು ಇದೆ ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಪುಟ್ಟ ಕೋಂ ಮುದ್ದ ಎನ್ನುವವರು ನಮ್ಮ ಕುಟುಂಬಕ್ಕೆ ಸೇರಿರುವುದಿಲ್ಲ. ತಿಮ್ಮಯ ಎನ್ನುವವರು ನಮ್ಮ ಕುಟುಂಬಕ್ಕೆ ಸೇರಿರುವುದಿಲ್ಲ. ತಿಮ್ಮಯ್ಯ ಅವರ ಮಗ ವೆಂಕಟಪ್ಪ ನಮ್ಮ ಕುಟುಂಬಕ್ಕೆ ಸೇರಿರುವುದಿಲ್ಲ. ಈ ದಾವೆಯ ಆಸ್ತಿ ಮತ್ತು 1 ನೇ ಪ್ರತಿವಾದಗೆ ಯಾವುದೇ ಸಂಭಂದ ಇಲ್ಲ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ಕಲ್ಪಿತ ಅಂಶಗಳನ್ನು ಸೃಷ್ಟಿಸಿ

ದಾವೆ ಹಾಕಲು ಯಾವುದೇ ಕಾರಣ ಇಲ್ಲದೆ ಇದ್ದರು ಸಹ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ಸರ್ವೆ ನಂ.40/1 ಆಸ್ತಿಯು ಮೂಲತಹ ತಿಮ್ಮಯ್ಯನವರಿಗೆ ಸೇರಿದ ಆಸ್ತಿ ಎಂದರೆ ಇರಬಹುದು. ಅದಕ್ಕೆ ಸಂಭಂದಿಸಿರುವ ನಿಪಿ-18, 19, 20, 21 ದಾಖಲೆಯನ್ನು ನಾನು ಹಾಜರುಪಡಿಸಿದ್ದೇನೆಂದರೆ ಸರಿ. ಸದರಿ ದಾಖಲೆಯಲ್ಲಿ ತಿಮ್ಮಯ್ಯನವರ ಹೆಸರು ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ತಿಮ್ಮಯ್ಯನವರ ಆಸ್ತಿಗೆ ಮತ್ತು ವಾದಿಗಳಿಗೆ ಸಂಭಂದ ಇರುವುದಿಲ್ಲ. ಓಲೆಕಾರ ರಂಗಯ್ಯ ಮತ್ತು ಅವರ ಮಗ ಲಕ್ಷ್ಮಣಯ್ಯ, ಲಕ್ಷ್ಮಮ್ಮ ನಮ್ಮ ಕುಟುಂಬಕ್ಕೆ ಸೇರಿರುವುದಿಲ್ಲ. ತಿಮ್ಮಯ್ಯನವರ ಮರಣದ ನಂತರ ಸದರಿ ಆಸ್ತಿಯನ್ನು ಅವರ ಮಗ ಹೆಚ್.ಜೆ. ವೆಂಕಟಪ್ಪನವರು ಅವರ ಹೆಸರಿಗೆ ಪೌತಿ ಖಾತೆ ಮಾಡಿಸಿಕೊಂಡಿದ್ದಾರೆಂದರೆ ಸರಿ. ಸದರಿ ವೆಂಕಟಪ್ಪನವರು ಪೌತಿ ಖಾತೆ ಮಾಡಿಸಿಕೊಂಡ ನಂತರ ಸದರಿ ಆಸ್ತಿ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ನನಗೆ ಈಗ 51 ವರ್ಷ ವಯಸ್ಸು. ಸದರಿ ವೆಂಕಟಪ್ಪನವರು ಸ್ವಾಧೀನದಲ್ಲಿ ಇದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ವೆಂಕಟಪ್ಪನವರು ಸರ್ವೆ ನಂ.40/1 ಆಸ್ತಿಯನ್ನು ದಿನಾ ಂಕಃ 24.10.1981 ರಂದು ಲಕ್ಷ್ಮಣಯ್ಯ ಮತ್ತು ಅವರ ಹೆಂಡತಿ ಲಕ್ಷ್ಮಮ್ಮ ನವರಿಗೆ ಮಾರಾಟ ಮಾಡಿದ್ದಾರೆಂದರೆ ಇರಬಹುದು. ಸದರಿ ಕ್ರಯಪತ್ರವನ್ನು ನಾನು ನಿಪಿ-22 ರಂತೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆಂದರೆ ಸರಿ. ಖರೀದಿಯ ನಂತರ ಲಕ್ಷ್ಮಣಯ್ಯ ಮತ್ತು ಅವರ ಹೆಂಡತಿ ಸದರಿ ಆಸ್ತಿಯ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ಸರ್ವೆ ನಂ.40/1 ಮತ್ತು 41/5 ಆಸ್ತಿಯನ್ನು ಲಕ್ಷ್ಮಣಯ್ಯ ಮತ್ತು ಲಕ್ಷ್ಮಮ್ಮ ನವರು 2 ನೇ ಪ್ರತಿವಾದಿಯ ತಂದೆ ಶಿವಕುಮಾರ್ ಸ್ವಾಮಿ ಬಿನ್ ?ಎಸ್.ಆರ್ ಮಹಾದೇವ್ ರವರಿಗೆ ರೂ.15,000/- ಮಾರಾಟ ಮಾಡಿದರು ಎಂದರೆ ಸರಿ. ನಾನು ದಿನಾಂಕಃ 24.10.1981 ರ ಕ್ರಯಪತ್ರವನ್ನು ಸಿವಿಲ್ ನ್ಯಾಯಾಲಯದಲ್ಲಿ ಇಲ್ಲಿಯವರೆಗೆ ಪ್ರಶ್ನಿಸಿರುವುದಿಲ್ಲ. ಲಕ್ಷ್ಮಣಯ್ಯ ಮತ್ತು ಅವರ ಹೆಂಡತಿ ಲಕ್ಷ್ಮಮ್ಮ ನವರು ದಿನಾಂಕಃ 14.05.1982 ರಲ್ಲಿ 2 ನೇ ಪ್ರತಿವಾದಿಯ ತಂದೆ ರವರಿಗೆ ಮಾರಾಟ ಮಾಡಿರುವ ಕ್ರಯಪತ್ರವನ್ನು ಗುಬ್ಬಿಯ ಸಿವಿಲ್ ನ್ಯಾಯಾಲಯದಲ್ಲಿ 2006 ರಲ್ಲಿ ದಾವೆ ಸಲ್ಲಿಸಿರುತ್ತೇನೆ. ಸದರಿ ದಾವೆಯು OS No.51/2007 ಮತ್ತು ಸದರಿ ದಾವೆಯು ಚಾಲ್ತಿಯಲ್ಲಿದೆ. ಇತ್ತಿಚೇಗೆ ಪ್ರತಿವಾದಿಗಳು ಜಾಗ ಖಾಲಿ ಮಾಡಿ ಎಂದು ಕೇಳಿದಕ್ಕೆ, ಈ

ದಾವೆ ಸಲ್ಲಿಸಿದ್ದೇನೆ. ನಾನು ಈ ದಾವೆಯನ್ನು ಸರ್ವೆ ನಂ.41/6 ರ ಜಮೀನಿಗೆ ಮಾತ್ರ ಸಲ್ಲಿಸಿದ್ದೇನೆ. 1982 ರಲ್ಲಿ ಖರೀದಿ ಮಾಡಿದ ನಂತರ 2 ನೇ ಪ್ರತಿವಾದಿಯ ತಂದೆ ಸದರಿ ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಕ್ರಯಪತ್ರದ ಆಧಾರದ ಮೇಲೆ 2 ನೇ ಪ್ರತಿವಾದಿಯ ತಂದೆಗೆ MR No.10/1982-83 ರ ಖಾತೆ ಬದಲಾವಣೆ ಆಗಿದೆ ಎಂದರೆ ಸರಿಯಲ್ಲ. ಸದರಿ ಖಾತೆ ಬದಲಾವಣೆ ಆದ ನಂತರ 2 ನೇ ಪ್ರತಿವಾದಿ ಮತ್ತು ಆತನ ತಂದೆ ಆಸ್ತಿಗಳ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. MR No.10/1982-83 ನ್ನು ನಾನು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ.

2 ನೇ ಪ್ರತಿವಾದಿ ಕಿರಣ್ ಕುಮಾರ್ ಮತ್ತು ಆತನ ತಂದೆ ಶಿವಕುಮಾರ್ ಸ್ವಾಮಿರವರು ದಾವಾ ಆಸ್ತಿಯನ್ನು 1 ನೇ ಪ್ರತಿವಾದಿ ಕಿಮಜಿ ಪಟೇಲ್ ರವರಿಗೆ ದಿನಾಂಕಃ 25.06.2007 ರಂದು ಮಾರಾಟ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಖರೀದಿಯ ದಿನಾಂಕದಿಂದ 1 ನೇ ಪ್ರತಿವಾದಿಯು ಸದರಿ ಆಸ್ತಿಯ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. 2007 ರಲ್ಲಿ ಕ್ರಯ ಆದ ನಂತರ 1 ನೇ ಪ್ರತಿವಾದಿಯ ಹೆಸರಿಗೆ MR No.1/2007-2008 ರಂತೆ ಖಾತೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿ ಮತ್ತು ಅವರ ತಂದೆ 1 ನೇ ಪ್ರತಿವಾದಿಗೆ ಮಾರಾಟ ಮಾಡುವಾಗ ಸರ್ವೆ ನಂ.40/1 ಪೋಡಿ ಆಗುವಾಗ ಸರ್ವೆ ನಂ.41/6 ಆಗಿದೆ ಎಂದರೆ ಸರಿಯಲ್ಲ. MR No.1/2007-08 ರನ್ನು ನಾನು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಈ ದಾವೆಯನ್ನು ಸಲ್ಲಿಸಿರುತ್ತೇನೆ. 1 ನೇ ಪ್ರತಿವಾದಿಯು 2007 ರಿಂದ ಸದರಿ ಆಸ್ತಿಯು ಸ್ವಾಧೀನದಲ್ಲಿ ಇದ್ದು ಅವರು ಕಂದಾಯ ಕಟ್ಟುತ್ತಿದ್ದಾರೆಂದರೆ ಸರಿಯಲ್ಲ.

2018 ರಲ್ಲಿ ರಾಷ್ಟ್ರೀಯ ಹೆದ್ದಾರಿಯ ಅಗಲೀಕರಣಕ್ಕೆ ಸರ್ವೆ ನಂ.41/6 ವಶಪಡಿಸಿಕೊಂಡಿದ್ದು, ಸದರಿ ವಶಪಡಿಸಿಕೊಂಡಿರುವ ಜಮೀನಿನ ಪರಿಹಾರ ಹಣವನ್ನು 1 ನೇ ಪ್ರತಿವಾದಿ ಪಡೆದುಕೊಂಡಿದ್ದಾರೆಂದರೆ ನನಗೆ ಗೊತ್ತಿಲ್ಲ. ನನ್ನ ಎಲ್ಲ ಸಂತ್ಯಾಂಶಗಳು ಗೊತ್ತಿದ್ದರು ಸಹ ದಾವಾ ಆಸ್ತಿಗಳನ್ನು ಕಬಳಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಿಪಿ-1 ಮತ್ತು 2 ವಂಶವೃಕ್ಷವನ್ನು ನಾನು ಬೇಕಂತೆ ಸೃಷ್ಟಿಸಿದ್ದೇನೆಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ಸಂಭಂದಪಟ್ಟ ಅಧಿಕಾರಿಗಳು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ದಾಖಲೆಯನ್ನು ತಾಲ್ಲೂಕು ಕಛೇರಿಯವರು ನೀಡಿರುತ್ತಾರೆ.

ಆದರಲ್ಲಿ ತಾಲ್ಲೂಕು ಕಛೇರಿಯ ಸೀಲ್ ಇಲ್ಲ ಎಂದರೆ ಸರಿಯಲ್ಲ. ನಿಪಿ-3 ಸೃಷ್ಟಿಸಿದ ದಾಖಲೆ ಎಂದರೆ ಸರಿಯಲ್ಲ. ನಿಪಿ-4 ರ ಪ್ರಕರಣಕ್ಕೆ ಮತ್ತು 1 ನೇ ಪ್ರತಿವಾದಿಗೆ ಸಂಭಂದ ಇಲ್ಲ ಎಂದರೆ ಸರಿ. ನಿಪಿ-5 ದಾಖಲೆಯಲ್ಲಿ ಸರ್ವೆ ನಂ.40/1 ವೆಂಕಟಪ್ಪನವರ ಹೆಸರಿಗೆ ಪೌತಿ ಖಾತೆ ಆಗಿರುವ ದಾಖಲೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-6 ದಾಖಲೆಯು ದಾವಾ ಆಸ್ತಿಗೆ ಸಂಭಂದಿಸಿರುವುದಿಲ್ಲ ಎಂದರೆ ಮಾರಾಟ ಮಾಡಿರುವುದನ್ನು ತೋರಿಸಲು ಹಾಜರುಪಡಿಸಿದ್ದೇನೆ. ಸದರಿ ದಾಖಲೆಯಲ್ಲಿ ಮಾರಾಟ ಮಾಡಿರುವ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ನಿಪಿ-7 ದಾಖಲೆಯು ಲಕ್ಷ್ಮಣಯ್ಯ ಮತ್ತು ಅವರ ಹೆಂಡತಿ ಲಕ್ಕಮ್ಮ ರವರು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ದಾಖಲೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ಸರ್ವೆ ನಂ.40/1 ಮತ್ತು 41/5 ಕ್ಕೆ ಸಂಭಂದಿಸಿದೆ ಎಂದರೆ ಸರಿ. ನಿಪಿ-8, 9 ದಾಖಲೆಯು ದಾವಾ ಆಸ್ತಿಗೆ ಸಂಭಂದಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ-10 ರಲ್ಲಿ ಪುಟ್ಟ ಕೋಂ ಮುದ್ದ ರವರ ಹೆಸರು ನಮೂದು ಇದೆ ಎಂದರೆ ಸರಿ. ಸದರಿ ದಾಖಲೆಗೆ ಮತ್ತು 1 ನೇ ಪ್ರತಿವಾದಿಗೆ ಸಂಭಂದ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-11, 12 ರಲ್ಲಿ 2 ನೇ ಪ್ರತಿವಾದಿಯ ತಂದೆರವರ ಹೆಸರು ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸರ್ವೆನಂ.41/5 ಆಸ್ತಿಯನ್ನು ಖರೀದಿ ಮಾಡಿ ಅದನ್ನು ಸರ್ವೆ ನಂ.41/6 ಎಂದು ತಿದ್ದುಪಡಿ ಮಾಡಿದ್ದಾರೆ. ನಿಪಿ-13 ರಲ್ಲಿ 2 ನೇ ಪ್ರತಿವಾದಿಯ ತಂದೆರವರ ಹೆಸರು ಇದೆ ಎಂದರೆ ಮೋಸದಿಂದ ಮಾಡಿಸಿಕೊಂಡಿದ್ದಾರೆ. ನಿಪಿ-14 ರಲ್ಲಿ 1 ನೇ ಪ್ರತಿವಾದಿಗೆ ಆಗಿರುವ ಮ್ಯೂಟೇಷನ್ ದಾಖಲೆಯನ್ನು ಹಾಜರುಪಡಿಸಿದ್ದೇನೆಂದರೆ ಸರಿ. ನಿಪಿ-15 ರಂತೆ ಖರೀದಿಯ ನಂತರ 1 ನೇ ಪ್ರತಿವಾದಿಯ ಹೆಸರು ಕಾಲಂ ನಂ.9 ರಲ್ಲಿ ಹೆಸರು ನಮೂದು ಇದೆ ಎಂದರೆ ತಪ್ಪಾಗಿ 41/5 ರ ಬದಲಿಗೆ 41/6 ಮಾಡಿಸಿಕೊಂಡಿದ್ದಾರೆ. ನಿಪಿ-16 ಮತ್ತು 17 ದಾವಾ ಆಸ್ತಿಗೆ ಸಂಭಂದಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಾನು 1 ನೇ ಪ್ರತಿವಾದಿಯ ಕ್ರಯಪತ್ರವನ್ನು ನಿಪಿ-24 ರಂತೆ ಹಾಜರುಪಡಿಸಿದ್ದೇನೆಂದರೆ ಸರಿ. ಸದರಿ ಕ್ರಯಪತ್ರವನ್ನು ರದ್ದತಿ ಕೋರಿ 2007 ರಿಂದ ನಾನು ಇಲ್ಲಿಯವರೆಗೆ ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ಹೊರತುಪಡಿಸಿ ಸದರಿ ಕ್ರಯಪತ್ರವನ್ನು ರದ್ದತಿ ಕೋರಿ ಸಲ್ಲಿಸಿದ್ದ ದಾವೆಯ ಬಗ್ಗೆ ದಾಖಲೆಗಳನ್ನು

ಹಾಜರುಪಡಿಸಿದ್ದೇನೆ. ಅದಕ್ಕೆ ಸಂಭಂದಿಸಿದಂತೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

OS No.51/2007 ದಾವೆಯನ್ನು ಸರ್ವೆ ನಂ.41/5 ರ ಜಮೀನಿಗೆ ಸಲ್ಲಿಸಿದ್ದೇನೆ. ಸದರಿ ದಾವೆಯಲ್ಲಿ ಸರ್ವೆ ನಂ.41/5 ಜಮೀನಿನ ಚಕ್ಕುಬಂದಿ ನನಗೆ ಗೊತ್ತಿಲ್ಲ. ಸರ್ವೆ ನಂ.41/5 ಜಮೀನಿನ ಒಟ್ಟು ವಿಸ್ತೀರ್ಣ ನನಗೆ ಗೊತ್ತಿಲ್ಲ. ನಾನು ಈ ದಾವೆಯನ್ನು ಸರ್ವೆ ನಂ.41/4 ರ ಪೋಡಿ 41/6 ರ ಜಮೀನಿಗೆ ಸಲ್ಲಿಸಿದ್ದೇನೆ. ನಿಪಿ-25 ದಾಖಲೆಯನ್ನು ನಾನು ಹಾಜರುಪಡಿಸಿದ್ದೇನೆ. OS No.51/2007 ಚಾಲ್ತಿಯಲ್ಲಿ ಇರುವ ಕಾರಣ ನಿಪಿ- 25 ದಾಖಲೆಯನ್ನು ಹಾಜರುಪಡಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಿಪಿ-26 ಪ್ರಕರಣವು ನಮ್ಮ ಕುಟುಂಬಕ್ಕೆ ಸಂಭಂದಿಸಿಲ್ಲ ಎಂದರೆ ಸರಿ. ಸದರಿ ದಾವೆಯನ್ನು ನಡೆಸಲು ಆಗುವುದಿಲ್ಲ ಎಂದು ದಿನಾಂಕಃ 30.11.2022 ರಂದು ವಾಪಸ್ಸು ಪಡೆದಿದ್ದಾರೆಂದರೆ ಸರಿ. ಸದರಿ ದಾವೆಯಲ್ಲಿ ನಾನು ಸೇರುವಾಗ ನಿಪಿ-26 ರ ಬಗ್ಗೆ ತಿಳಿದುಕೊಂಡು ಸೇರಿಕೊಂಡೆವು ಎಂದರೆ ಅವರು ಆಸ್ತಿಯ ಹತ್ತಿರ ಬಂದು ಜಗಳ ಮಾಡಿದ್ದಕ್ಕೆ ಸೇರಿಕೊಂಡೆವು. 1 ನೇ ಪ್ರತಿವಾದಿಗೆ ತೊಂದರೆ ಕೊಡಲು ಸದರಿ ದಾವೆಯಲ್ಲಿ ಸೇರಿಕೊಂಡೆವು ಎಂದರೆ ಸರಿಯಲ್ಲ. ನಾನು ತಪ್ಪು ಮಾಹಿತಿ ಕೊಡಲು ನಿಪಿ-26 ದಾಖಲೆಗಳನ್ನು ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ.

ನಿಪಿ-27 ರಲ್ಲಿ ಇರುವ ಸಿದ್ದಗಂಗಮ್ಮ ನನ್ನ ತಾಯಿ. ಸದರಿ ಅರ್ಜಿಯನ್ನು MR No.1/2007-08 ರನ್ನು ಪ್ರಶ್ನಿಸಿ ಸಲ್ಲಿಸಿರುತ್ತೇನೆಂದರೆ ಸರಿ. ಸುಮಾರು 26 ವರ್ಷಗಳ ನಂತರ ಅರ್ಜಿಯನ್ನು ಹಾಕಲು ಬರುವುದಿಲ್ಲ ಎಂದು ನಮ್ಮ ಅರ್ಜಿ ವಜಾ ಮಾಡಿದ್ದಾರೆಂದರೆ ಸಿವಿಲ್ ನ್ಯಾಯಾಲಯದಲ್ಲಿ ತೀರ್ಮಾನ ಮಾಡಿಕೊಳ್ಳಿ ಎಂದು ವಜಾ ಮಾಡಿದ್ದಾರೆ. ಅದರ ಬಗ್ಗೆ ನಿಪಿ-27 ರಲ್ಲಿ ನಮೂದು ಇಲ್ಲ ಎಂದರೆ ಸರಿಯಲ್ಲ. ಅದರ ಬಗ್ಗೆ ನಮೂದು ಇಲ್ಲದೆ ಇದ್ದರು ಸಹ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಾಯಿ 1 ನೇ ಪ್ರತಿವಾದಿಯ ವಿರುದ್ದ ಸಲ್ಲಿಸಿದ್ದ ಅರ್ಜಿಯು ನಿಪಿ-28 ಎಂದರೆ ಸರಿ. ನಿಪಿ-29 ಸದರಿ ಪ್ರಕರಣಗಳಿಗೆ ಸಂಭಂದಿಸಿರುವ ದಾಖಲೆ ಎಂದರೆ ಸರಿ.

ನಿಪಿ-30 ರಲ್ಲಿ ಸರ್ವೆ ನಂ.40/1, 41/5 ರಲ್ಲಿ ಲಕ್ಷ್ಮಣಯ್ಯರವರಿಗೆ ಕ್ರಯ ಆಗಿರುವ ಬಗ್ಗೆ ನಮೂದು ಇದೆ ಎಂದರೆ ಸರಿ. ನಿಪಿ-31, 32 ಪಹಣಿಯನ್ನು ಈ ದಾವೆಗೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ-27 ಅರ್ಜಿಗೆ ಸಂಭಂದಿಸಿದಂತೆ ಮೇಲ್ಮನವಿ ಸಲ್ಲಿಸಿರುವ ದಾಖಲೆ

ನಿಪಿ-33 ಎಂದರೆ ಸರಿ. ಸದರಿ ಮೇಲ್ಮನವಿಯಲ್ಲಿ ಕ್ರಯಪತ್ರ ಆಗಿರುವುದು ನಿಜ ಎಂದು ನಮ್ಮ ಮೇಲ್ಮನವಿ ವಜಾ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ನನಗೆ ವಜಾ ಆಗಿರುವ ಬಗ್ಗೆ ಗೊತ್ತಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆದೇಶದ ಪ್ರತಿಯನ್ನು ನಾನು ಜಿಲ್ಲಾಧಿಕಾರಿ ಕಛೇರಿಯಿಂದ ಪಡೆದಿದ್ದೇನೆಂದರೆ ಸರಿಯಲ್ಲ.

ನಿಪಿ-34 ಮತ್ತು 35 ರಲ್ಲಿ 1 ನೇ ಪ್ರತಿವಾದಿಯ ಹೆಸರು ಇದೆ ಎಂದರೆ ಸರಿ. ನಿಪಿ-36 ರಿಂದ 44, 47, 48 , 49 ರ ದಾಖಲೆಗಳನ್ನು ಈ ದಾವೆಗೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿ-45 ರಲ್ಲಿ ಇರುವ ಶಿವಣ್ಣ ಬಿನ್ ಕೆಂಚಯ್ಯ ನಮ್ಮ ಕುಟುಂಬಕ್ಕೆ ಸಂಭಂದಿಸಿರುವುದಿಲ್ಲ. ನಿಪಿ-46 ದಾಖಲೆಯು ದಾವಾ ಆಸ್ತಿಗೆ ಸಂಭಂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-50 ದಾಖಲೆಯು 1 ನೇ ಪ್ರತಿವಾದಿಗೆ ಸಂಭಂದಿಸಿದೆ ಎಂದರೆ ನಮ್ಮ ಆಸ್ತಿಗೆ ಸಂಭಂದಿಸಿದೆ.

ಜಿ.ಎನ್ ನರಹರಿ ಬಿನ್ ಜಿ.ಎಸ್ ನರಸಿಂಗ ರಾವ್ ನನ್ನ ಸ್ನೆಹೀತ. ಅವರು ನಮ್ಮ ಕುಟುಂಬಕ್ಕೆ ಸೇರಿರುವುದಿಲ್ಲ ಎಂದರೆ ಸರಿ. ನಾವು ಹಾಕಿರುವ ಎಲ್ಲ ದಾವೆಗಳನ್ನು ಸದರಿ ನರಹರಿ ರವರು ನಡೆಸುತ್ತಿದ್ದಾರೆಂದರೆ ನನ್ನ ತಾಯಿಯ ಪರವಾಗಿ OS No.51/2007 ರಲ್ಲಿ ಜಿ.ಪಿ.ಎ ಬರೆದುಕೊಟ್ಟಿದ್ದಾರೆ. ನನ್ನ ತಾಯಿ ಮತ್ತು ಚಿಕ್ಕಪ್ಪ ಜಿ.ಪಿ.ಎ ಬರೆದುಕೊಟ್ಟಿದ್ದಾರೆ. ಅದರ ಮಾಹಿತಿ ನನಗೆ ಇರುವುದಿಲ್ಲ. ನಾನು ಓದದೆ ಇದ್ದ ಕಾರಣ ಸದರಿ ದಾವೆಯನ್ನು ನಡೆಸಲಿಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳನ್ನು ನಾನು ಪಡೆದಿದ್ದೇನೆ. ದಾವೆಯನ್ನು ಹಾಕುವಾಗ ನಾನು ದಾಖಲೆಯನ್ನು ಪಡೆದೆನು. ನನ್ನ ತಾಯಿ ಜೀವಂತ ಇದ್ದಾರೆ. ಸದರಿ ನರಹರಿ ಈ ದಾವೆಯ ದಾಖಲೆಗಳನ್ನು ಪಡೆದು ನನ್ನ ವಿರುದ್ದ ಈ ದಾವೆ ಸಲ್ಲಿಸಿದ್ದಾರೆಂದರೆ ಸರಿ. ನಾನು, ಸದರಿ ನರಹರಿ ಮತ್ತು ವಾದಿಗಳು 1 ನೇ ಪ್ರತಿವಾದಿಯ ಆಸ್ತಿಯನ್ನು ಕಬಳಿಸಲು ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಮಾರಾಟ ಆಗಿರುವ ಜಮೀನಿಗೆ ನಮಗೆ ಮತ್ತು ನಮ್ಮ ಪೂರ್ವಜರಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾವು ಮತ್ತು ನಮ್ಮ ಪೂರ್ವಜರ ದಾವಾ ಆಸ್ತಿಯಲ್ಲಿ ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಬೆಲೆ ಬಾಳುವ ಕಾರಣದಿಂದ ಮತ್ತು 1 ನೇ ಪ್ರತಿವಾದಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

OS No.192/2008 ಸರ್ವೆ ನಂ.41/4ಎ ಮತ್ತು 41/4ಬಿ ಜಮೀನಿಗೆ ಸಂಭಂದಿಸಿರುತ್ತದೆ. ಸುಳ್ಳು ವ್ಯಾಜ್ಯ ಕಾರಣ ಸೃಷ್ಟಿಸಿ ಸುಳ್ಳು ದಾವೆ ಸಲ್ಲಿಸಿದ್ದೇನೆಂದರೆ ಸರಿಯಲ. ನಮಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**Cross Examination: by Counsel for Defendant No.2. :**

Counsel called out absent. Hence, taken as nil.

**Re examination – Nil.**

(Typed to my dictation in open court)

R.O.I & A.C.

Addl. Senior Civil Judge and
JMFC., Gubbi